ರಾಜ್ಯದಲ್ಲಿ ಯೋಜನಾ ಮಂಡಳಿಗಳು

261 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆದು ಎರಡು ವರ್ಷ ಸಂದಿದ್ದರೂ ಸಹ ಈವರೆಗೆ ಕೆಲವು ಜಿಲ್ಲೆಗಳಲ್ಲಿ ಯೋಜನಾ ಮಂಡಿಳಿಗಳು ಕಾರ್ಯಾರಂಭ ಮಾಡದಿರುವುದಕ್ಕೆ ಕಾರಣಗಳೇನು?

ಆ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಯೋಜನಾ ಮಂಡಳಿಗಳು ಕಾರ್ಯಾರಂಭ ಮಾಡಿವೆ. ಎಷ್ಟು ಜಿಲ್ಲೆಗಳಲ್ಲಿ ಇನ್ನೂ ಮಾಡಿಲ್ಲ?

ಇ) ಇನೆಷ್ಟು ವರ್ಷಗಳಲ್ಲಿ ಸರ್ಕಾರವು ಈ ಯೋಜನಾ ಮಂಡಳಿಗಳು ಕಾರ್ಯರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಜಿಲ್ಲಾ ಯೋಜನಾ ಸಮಿತಿ ರಚಿಸಲು 17 ಜಿಲ್ಲೆಗಳಲ್ಲಿ ಸದಸ್ಯರ ಚುನಾವಣೆ ನಡೆದಿದ್ದು ರಾಜ್ಯ ಸರ್ಕಾರ 7 ಹೊಸ ಜಿಲ್ಲೆಗಳನ್ನು ರಚಿಸಲು ನಿರ್ಧರಿಸಿರುವುದರಿಂದ, ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರ ಚುನಾವಣೆಗಳನ್ನು ಮುಂದೂಡಲಾಗಿದೆ. ಹೊಸ ಜಿಲ್ಲೆಗಳ ರಚನೆ ಕಾರ್ಯ ಸಂಪೂರ್ಣಗೊಂಡ ನಂತರ ಜಿಲ್ಲಾ ಯೋಜನಾ ಮಂಡಳಿಗೆ ಅಧ್ಯಕ್ಷರ ಆಯ್ಕೆ ನಡೆದು ಅವು ಕಾರ್ಯಾರಂಭ ಮಾಡುತ್ತವೆ.

ಆ) ಅಧ್ಯಕ್ಷರ ಆಯ್ಕೆ ನಡೆಯದೇ ಇರುವುದರಿಂದ, ಯಾವ ಜಿಲ್ಲೆಯಲ್ಲಿಯೂ ಇನ್ನೂ ಕಾರ್ಯಾರಂಭ ಮಾಡಿಲ್ಲ.

ಇ) ಜಿಲ್ಲೆಗಳ ಪುನರ್‌ವಿಂಗಡಣೆ ಕಾರ್ಯ ಮುಗಿದ ಕೂಡಲೇ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಂಚೋಳಿ ತಾಲ್ಲೂಕಿನ ಅರಣ್ಯ ಭೂಮಿ

262 - ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಇರುವ ಅರಣ್ಯ ಪ್ರದೇಶಗಳ ವಿಸ್ತೀರ್ಣವೆಷ್ಟು ಅವುಗಳು ಯಾವುವು?

ಆ) ಇವುಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಿಂದ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ)

1. ಕಾದಿಟ್ಟ ಅರಣ್ಯ :	5911.787 ಹೆಕ್ಟೇರ್
2. ರಕ್ಷಿತ ಅರಣ್ಯ :	8864.714 ಹೆಕ್ಟೇರ್
3. ವರ್ಗೀಕರಣವಾಗದ :	5588.535 ಹೆಕ್ಟೇರ್
ಈಶಿತ ಅರಣ್ಯ ಪ್ರದೇಶ	
ಒಟ್ಟು	**20365.036 ಹೆಕ್ಟೇರ್**

ಆ) ವಿವರಣೆ

ವರ್ಷ	ಗುರಿ		ಸಾಧನೆ	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
		(ಲಕ್ಷ ರೂ.ಗಳು)		(ಲಕ್ಷ ರೂ.ಗಳು)
94-95	150.20 ಹೆ.	10.905	150.20 ಹೆ.	10.855
95-96	174.00 ಹೆ.	11.055	174.00 ಹೆ.	11.044
96-97	239.99 ಹೆ.	20.435	239.00 ಹೆ.	20.421
ಒಟ್ಟು	**563.20 ಹೆ.**	**42.395**	**563.20 ಹೆ.**	**42.320**

ಮರಣಾನಂತರ ಶರೀರವನ್ನು ದಾನ ಮಾಡುವುದಕ್ಕಾಗಿ ಕಾನೂನು

263 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಜೀವಂತ ಇರುವಾಗ ಕಿಡ್ನಿ ದಾನ ಮಾಡಲು ಕಾನೂನಿನಲ್ಲಿ ಅವಕಾಶ ಇದ್ದಂತೆ ಮೃತರಾದಾಗ ಕಣ್ಣು ದಾನ ಮಾಡಲೂ ಸಹ ಕಾನೂನಿನಲ್ಲಿ ಅವಕಾಶ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಮರಣೋತ್ತರ ಶವದಾನಕ್ಕೆ ವ್ಯಕ್ತಿಯೊಬ್ಬ ಲಿಖಿತವಾಗಿ ಮರಣೋತ್ತರ ಶವದಾನಕ್ಕೆ ಬಯಸಿದರೆ ಅದಕ್ಕೆ ಅವಕಾಶ ಇದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದ ಪಕ್ಷದಲ್ಲಿ ಕಾನೂನಿಗೆ ತಿದ್ದುಪಡಿ ತರುವ ಬಗ್ಗೆ ಸರ್ಕಾರದ ನಿಲುವೇನು?

ಈ) ಮಹಾರಾಷ್ಟ್ರ ಸರ್ಕಾರದವರು ಹಾಗೂ ನೆರೆ ರಾಜ್ಯಗಳಲ್ಲಿ ಮರಣೋತ್ತರ ಶವ ದಾನಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?